# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು** : **ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **291**

**ಉತ್ತರಿಸಬೇಕಾದ ದಿನಾಂಕ** : **29-01-2026**

**ಉತ್ತರಿಸಬೇಕಾದ ಸಚಿವರು** : **ಸನ್ಮಾನ್ಯ ಮುಖ್ಯಮಂತ್ರಿ**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 'ಸ್ತ್ರೀಶಕ್ತಿ' ಸಂಘಗಳ ಮೂಲಕ ನೀಡಲಾಗುತ್ತಿರುವ ಶೂನ್ಯ ಬಡ್ಡಿ ದರದ ಸಾಲದ ಯೋಜನೆಯು ಪ್ರಸ್ತುತ ಸ್ಥಗಿತಗೊಂಡಿದೆಯೇ; | 'ಸ್ತ್ರೀಶಕ್ತಿ' ಸಂಘಗಳ ಮೂಲಕ ನೀಡಲಾಗುತ್ತಿರುವ ಶೂನ್ಯ ಬಡ್ಡಿ ದರದ ಸಾಲದ ಯೋಜನೆಯು ಸ್ಥಗಿತಗೊಂಡಿರುವುದಿಲ್ಲ.<br><br>ಸ್ವಸಹಾಯ ಗುಂಪುಗಳಿಗೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಹಾಗೂ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಮೂಲಕ ರೂ.5.00 ಲಕ್ಷಗಳ ವರೆಗಿನ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಿತರಿಸುವ ಯೋಜನೆಯನ್ನು 2025-26ನೇ ಸಾಲಿಗೂ ಸಹ ಮುಂದುವರೆಸಿ ಸರ್ಕಾರದ ಆದೇಶ ಸಂಖ್ಯೆ: ಸಿಒ 175 ಸಿಎಲ್ಎಸ್ 2025, ದಿನಾಂಕ:03-11-2025 ರಂದು ಆದೇಶ ಹೊರಡಿಸಲಾಗಿದೆ.<br><br>ಡಿಸೆಂಬರ್-2025 ರ ಅಂತ್ಯಕ್ಕೆ ಸಹಕಾರ ಸಂಸ್ಥೆಗಳು 10,218 ಸ್ವಸಹಾಯ ಗುಂಪುಗಳಿಗೆ ರೂ.503.15 ಕೋಟಿಗಳ ಸಾಲವನ್ನು ವಿತರಿಸಿರುತ್ತವೆ. |
| ಆ) | ಹೌದಾದಲ್ಲಿ, ಈ ಸಂಘಗಳಿಗೆ ಪುನಃ ಸಾಲ ಸೌಲಭ್ಯ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಮೇಲಿನ ಉತ್ತರದಿಂದಾಗಿ ಉದ್ಭವಿಸುವುದಿಲ್ಲ. |
| ಇ) | ಸಹಕಾರಿ ಬ್ಯಾಂಕುಗಳಲ್ಲಿ ರೈತರು ಇಟ್ಟಿರುವ ಅಡಮಾನದ ಚಿನ್ನವನ್ನು ಹರಾಜು ಮಾಡದಂತೆ ಸರ್ಕಾರ ಯಾವುದೇ ಅಧಿಕೃತ ಆದೇಶ ಹೊರಡಿಸಿದೆಯೇ? (ಸಂಪೂರ್ಣ ವಿವರ ನೀಡುವುದು) | ಸಹಕಾರಿ ಬ್ಯಾಂಕುಗಳಲ್ಲಿ ರೈತರು ಇಟ್ಟಿರುವ ಅಡಮಾನದ ಚಿನ್ನವನ್ನು ಹರಾಜು ಮಾಡದಂತೆ ಸರ್ಕಾರ ಆದೇಶ ಹೊರಡಿಸಿರುವುದಿಲ್ಲ. |

**ಕಡತ ಸಂಖ್ಯೆ: ಸಿಒ 43 ಸಿಎಲ್ಎಸ್ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ